Series #CDBA

**SET-4**

Q.P. Code **13**

Roll No. | | | | | | | | |

Candidates must write the Q.P. Code on the title page of the answer-book.

- ಈ ಪ್ರಶ್ನೆ ಪತ್ರಿಕೆಯಲ್ಲಿ **15** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಈ ಪ್ರಶ್ನೆ ಪತ್ರಿಕೆಯಲ್ಲಿ **15** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

- Please check that this question paper contains **15** printed pages.
- Please check that this question paper contains **15** questions.
- Q.P. Code given on the right hand side of the question paper should be written on the title page of the answer-book by the candidate.
- **Please write down the serial number of the question in the answer-book before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the candidates will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : **3** ಗಂಟೆ* — *ಗರಿಷ್ಠ ಅಂಕಗಳು : **80***

*Time allowed : **3** hours* — *Maximum Marks : **80***

**General Instructions :**

Read the following instructions carefully and follow :

1. This question paper contains **A, B, C & D four (4)** Sections & it has total **15** questions.
2. **Section A** : (Unseen Comprehension (Passage) Question No. **1** and **2**.
   Seen Comprehension (Prose & Poem) Question No. **3** and **4**.
3. **Section B** : MCQs (Grammar) Question No. **5** and **6**, MCQs (Non-detailed portion) Question No. **7**.
4. **Section C** : Writing Skill (Letter writing, Report & Essay writing) Question No. **8** to **10**.
5. **Section D** : Descriptive type. Question No. **11** to **15**.
   Attempt questions as per specific instructions.
   Write Question No. in answer book before attempting it.

**ಸೂಚನೆಗಳು :**

**ಕೆಳಗೆ ನೀಡಲಾದ ಸೂಚನೆಗಳನ್ನು ಗಮನವಿಟ್ಟು ಓದಿ :**

1. ಈ ಪ್ರಶ್ನೆ ಪತ್ರಿಕೆಯು **A, B, C** ಮತ್ತು **D** ಎಂಬ **ನಾಲ್ಕು (4)** ಭಾಗಗಳನ್ನು ಮತ್ತು ಒಟ್ಟು **15** ಪ್ರಶ್ನೆಗಳನ್ನು ಒಳಗೊಂಡಿದೆ.
2. **ವಿಭಾಗ A,** ವಾಚನ ಮತ್ತು ಗ್ರಹಿಕಾ ಕೌಶಲ.
   ಅಪ್ರಕಟಿತ ಗದ್ಯಭಾಗ ಪ್ರಶ್ನೆ ಸಂಖ್ಯೆ **1** ಮತ್ತು **2**.
   ಪ್ರಕಟಿತ ಗದ್ಯಭಾಗ ಪ್ರಶ್ನೆ ಸಂಖ್ಯೆ **3** ಮತ್ತು **4**.
3. **ವಿಭಾಗ B,** ಬಹು ಆಯ್ಕೆ ಪ್ರಶ್ನೆಗಳು (ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ) ಪ್ರಶ್ನೆ ಸಂಖ್ಯೆ **5** ರಿಂದ **7**.
4. **ವಿಭಾಗ C,** ಬರವಣಿಗೆ ಕೌಶಲ್ಯ (ಪತ್ರ, ವರದಿ ಮತ್ತು ಪ್ರಬಂಧ) ಪ್ರಶ್ನೆ ಸಂಖ್ಯೆ **8** ರಿಂದ **10**.
5. **ವಿಭಾಗ D,** ಬರವಣಿಗೆ ಕೌಶಲ್ಯ (ಪಠ್ಯಗಳ ಅಧ್ಯಯನ) ಪ್ರಶ್ನೆ ಸಂಖ್ಯೆ **11** ರಿಂದ **15**.
   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನೀಡಿರುವ ಸೂಚನೆಗಳನ್ನು ಗಮನಿಸಿ.
   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಹಾಳೆಯಲ್ಲಿ ಪ್ರಶ್ನೆ ಸಂಖ್ಯೆಯನ್ನು ಬರೆಯಿರಿ.

## PART-A : (40 ಅಂಕಗಳು)

## SECTION – A

### (Unseen Passage, Seen Prose & Poem)

### ವಾಚನ ಮತ್ತು ಗ್ರಹಿಕಾ ಕೌಶಲ : 20 ಅಂಕಗಳು

1. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಅನೇಕ ಬಾರಿ ಸಮಸ್ಯೆಗಳು ಉಂಟಾಗುತ್ತವೆ. ಇಂಥ ಸಂದರ್ಭದಲ್ಲಿ ತರ್ಕದಿಂದ ಸಮಸ್ಯೆಯ ಮೂಲವನ್ನು ಶೋಧಿಸುವುದು ಫಲಕಾರಿಯಾಗುವುದು ಕಷ್ಟ. ಇಂತಹದರಲ್ಲಿ ಬೇಕಾಗಿರುವುದು ವ್ಯಗ್ರತೆಯ ಉಪಶಮನ. ಅದಕ್ಕೆ ಸಹನೆಯಿಂದ, ಸಹಾನುಭೂತಿಯಿಂದ, ನೌಕರರ ಅನಿಸಿಕೆಗಳನ್ನು ಕೇಳುವುದು ಮುಖ್ಯವಾದ ಮಾರ್ಗ. ಹಾಗೆ ವ್ಯಕ್ತಪಡಿಸಿದಾಗಲೇ ಸಮಸ್ಯೆಯ ಬಗ್ಗೆ ಅವನ ಭಾವನೆಯ ತೀವ್ರತೆ ಸಾಕಷ್ಟು ಕಡಿಮೆಯಾಗುತ್ತದೆ. ಕೇಳಿದ ನಂತರ ಸಹಾನುಭೂತಿಯಿಂದ ಪರಿಶೀಲಿಸುವ ಭರವಸೆಯಿತ್ತರೆ ಅದು ಬಹುಮಟ್ಟಿಗೆ ಸಮಸ್ಯೆಯನ್ನು ಪರಿಹರಿಸುತ್ತದೆ. ಏಕೆಂದರೆ ಮರುದಿನ ಅದು ಅವನ ಜ್ಞಾಪಕದಲ್ಲೇ ಇರುವುದಿಲ್ಲ ! ಹೀಗೆ ಸಹನೆ ಅನೇಕ ಸಮಸ್ಯೆಗಳನ್ನು ಬಗೆಹರಿಸಬಲ್ಲದು. ಸಹನೆಯಿಂದ ಕೇಳಿದರೆ, ಹೇಳುವವನು ಒಂದು ರೀತಿಯ ಗೌರವವನ್ನು ಪಡೆದಂತಾಗುವುದರಿಂದ, ಅವನ ಮನಸ್ಸಿನ ವ್ಯಗ್ರತೆ ಕಡಿಮೆಯಾಗುತ್ತದೆ. ಸಮಸ್ಯೆಗಳು ಪರಿಹಾರವಾಗದಿದ್ದರೂ ಉಲ್ಬಣಗೊಳ್ಳುವ ಸಾಧ್ಯತೆ ಖಂಡಿತ ಕಡಿಮೆಯಾಗುತ್ತದೆ. ಸಹನೆಯಿಂದ ಆಗುವ ಇನ್ನೊಂದು ಪರಿಣಾಮ – ಎದುರಾಳಿಯ ಮನಸ್ಸಿನಲ್ಲಿ ಉಂಟಾಗುವ ಗೆಲುವಿನ ಭಾವ. ತನ್ನ ಅನಿಸಿಕೆಗಳನ್ನು ಈತ ತಳ್ಳಿ ಹಾಕಲಿಲ್ಲ, ವಿರೋಧಿಸಲಿಲ್ಲ ಎನ್ನುವುದು ಹೇಳಿದವನ ego ವನ್ನು ತುಂಬಾ ಸಾಂತ್ವನಗೊಳಿಸುತ್ತದೆ. ಇದರಿಂದ ಆತನ ಉದ್ವೇಗ ಶಮನವಾಗುತ್ತದೆ.

ಆದರೆ ಸಹನೆಗೂ ಮಿತಿಯಿರಬೇಕು. ಇಲ್ಲದೆ ಹೋದರೆ ಅದೇ ಒಂದು ಬಗೆಯ ದೌರ್ಬಲ್ಯವಾಗಿ ಪರಿಣಮಿಸಿ, ಸಮಸ್ಯೆಗಳನ್ನು ಸೃಷ್ಟಿಸಬಹುದು. ಏನು ಹೇಳಿದರೂ ಬಾಯಿ ಮುಚ್ಚಿಕೊಂಡು ಕೇಳುವ, ಬಡಪಾಯಿಯ ಅಸಹಾಯಕತೆಯಾಗಿ, ಸಹನೆ ಮಾರ್ಪಡಬಾರದು. ಹಾಗಾಗದಂತೆ ಇರಬೇಕಾದರೆ ಸ್ಪಷ್ಟವಾದ, ಉದ್ದೇಶಪೂರ್ವಕವಾದ ಗಂಭೀರ ದುರ್ವರ್ತನೆಗಳನ್ನೂ, ದುಶ್ಚಟಗಳನ್ನೂ ದೃಢವಾಗಿ ವಿರೋಧಿಸುವುದು ಅಗತ್ಯ. ಒಬ್ಬ ನೌಕರ ಪದೇ ಪದೇ ಅಶಿಸ್ತಿನ ವರ್ತನೆಯನ್ನು ಉದ್ದೇಶಪೂರ್ವಕವಾಗಿ ತೋರಿಸಿದರೆ ಅದನ್ನು ವಿರೋಧಿಸಬೇಕಾಗುತ್ತದೆ. ಆಗ ಕಟ್ಟುನಿಟ್ಟಾದ ಕ್ರಮವನ್ನು ಯಶಸ್ವಿಯಾಗಿ ಕೈಗೊಳ್ಳುವ ಸಾಮರ್ಥ್ಯವನ್ನು ತೋರಿಸಿದರೆ ಮಾತ್ರ, ಸಹನೆ ಅರ್ಥಪೂರ್ಣವಾಗುತ್ತದೆ. ಸಹನೆ Positive Quality ಆಗಬೇಕಾದರೆ ಅದು ಹೀಗೆ ಶಕ್ತಿಯ ಸಂಕೇತವಾಗಬೇಕಾಗುತ್ತದೆ. ಆಗ ಮಾತ್ರ ಅದು ಪರಿಣಾಮಕಾರಿಯಾಗುತ್ತದೆ. ಆದರೆ, ಇಂಥ ಗಂಭೀರ ಕ್ರಮವನ್ನು ಕೊನೆಯ ಅಸ್ತ್ರವಾಗಿ ಮಾತ್ರ ಉಪಯೋಗಿಸಬೇಕು. ಇದು ಮುಖ್ಯ.

ಸಹನೆಯಂತೆಯೇ ಅತ್ಯಾವಶ್ಯಕವಾದ ಇನ್ನೊಂದು ಗುಣ ಪ್ರಾಮಾಣಿಕತೆ. ಪ್ರಾಮಾಣಿಕತೆ ಒಂದು ದೊಡ್ಡ ಶಕ್ತಿ. ಪ್ರಾಮಾಣಿಕತೆಯನ್ನು ತ್ರಿಕರಣಸಾಂಗತ್ಯ ಎಂದೂ ಕರೆಯಬಹುದು. ಅಂದರೆ ಯೋಚಿಸಿದ್ದೂ, ಹೇಳುವುದೂ, ಮಾಡುವುದೂ ಒಂದೇ ಆಗಿರುವುದು. ಉದಾಹರಣೆಗೆ ನೌಕರರಿಗೆ ಒಂದು ಭರವಸೆಯನ್ನು ಕೊಟ್ಟರೆ, ಅದನ್ನು ಕೃತಿಶಃ ನಡೆಸುವುದು ಅಥವಾ ಕನಿಷ್ಠಪಕ್ಷ ಕೃತಿಗಿಳಿಸಲು ನಿಜವಾದ ಯತ್ನ ಮಾಡುವುದು ಪ್ರಾಮಾಣಿಕತೆ ; ಹಾಗೆ ಮಾಡದಿದ್ದರೆ ಅದು ಅಪ್ರಾಮಾಣಿಕತೆಯಾಗುತ್ತದೆ ; ಮೋಸಗಾರಿಕೆಯಾಗುತ್ತದೆ. ಮೋಸಕ್ಕೆ ಒಳಗಾದವನು ತನಗಾದ ಅವಮಾನವನ್ನೂ, ಆಘಾತವನ್ನೂ ಮರೆಯುವುದು ಕಷ್ಟ. ಅದು ಒಂದಲ್ಲ ಒಂದು ರೂಪದಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ, ಸ್ಫೋಟವಾಗದೇ ಇರುವುದಿಲ್ಲ. ಒಂದು ವೇಳೆ ಸ್ಫೋಟವಾಗದೆ ಹೋದರೆ, ಒಳಗೊಳಗೆ ಉರಿಯುತ್ತಿರುತ್ತದೆ. ಆದ್ದರಿಂದ ಪ್ರಾಮಾಣಿಕತೆಯಿಂದ ಮನುಷ್ಯನ ಹೃದಯವನ್ನು ಗೆಲ್ಲಲು ಸಾಧ್ಯ. ಆಡಿದ ಮಾತನ್ನು, ನೀಡಿದ ಭರವಸೆಯನ್ನು, ಕೃತಿಶಃ ನಡೆಸುವುದರಲ್ಲಿ, ಯಶಸ್ವಿಯಾಗದಿದ್ದರೂ, ಪ್ರಯತ್ನ ಪ್ರಾಮಾಣಿಕವಾಗಿದ್ದರೆ, ಅದಕ್ಕೆ ಬೆಲೆ ಇದೆ.

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

**ಪ್ರಶ್ನೆಗಳು.**

I. ನೌಕರರ ಅನಿಸಿಕೆಗಳನ್ನು ______ ಯಿಂದ ಕೇಳಬೇಕು.

(a) ಅಸಹನೆ – ಸಹಾನುಭೂತಿ (b) ಸಹನೆ – ಶಾಂತಿಯಿಂದ

(c) ಸಹನೆ – ಸಹಾನುಭೂತಿ (d) ಸಹಾನುಭೂತಿ – ಶಾಂತಿ

II. ಸಹನೆಯಿಂದಾಗುವ ಪರಿಣಾಮಗಳು

1. ಮನಸ್ಸಿನ ವ್ಯಗ್ರತೆ ಕಡಿಮೆಯಾಗುತ್ತದೆ.
2. ಎದುರಾಳಿಯ ಮನಸ್ಸಿನಲ್ಲಿ ಗೆಲುವಿನ ಭಾವ.
3. ಉದ್ವೇಗ ಶಮನವಾಗುವುದಿಲ್ಲ.
4. ego ವನ್ನು ತುಂಬಾ ಸಾಂತ್ವನಗೊಳಿಸುತ್ತದೆ.

(a) 1, 2 ಮತ್ತು 3 (b) 2, 3 ಮತ್ತು 4

(c) 1, 3 ಮತ್ತು 4 (d) 1, 2 ಮತ್ತು 4

III. ಸಹನೆಗೂ ಮಿತಿಯಿರಬೇಕು. ಇಲ್ಲದಿದ್ದರೆ …

(a) ಸಮಸ್ಯೆಗಳನ್ನು ಸೃಷ್ಟಿಸಬಲ್ಲದು (b) ಏನೂ ಆಗದು

(c) ಸಮಸ್ಯೆಗಳನ್ನು ಪರಿಹರಿಸಬಹುದು (d) ಸಮಸ್ಯೆ ಕಡಿಮೆ ಮಾಡಬಹುದು

IV. ಪ್ರಾಮಾಣಿಕತೆಯನ್ನು ______ ಎಂದೂ ಕರೆಯಬಹುದು.

(a) ಕರಣ ಸಾಂಗತ್ಯ (b) ತ್ರಿಕರಣ ಸಾಂಗತ್ಯ

(c) ದ್ವಿಕರಣ ಸಾಂಗತ್ಯ (d) ಸಜ್ಜನರ ಸಾಂಗತ್ಯ

V. ಪ್ರಾಮಾಣಿಕತೆಯಿಂದ ಮನುಷ್ಯನ ______ ಗೆಲ್ಲಲು ಸಾಧ್ಯ.

(a) ಮನಸ್ಸನ್ನು (b) ಬುದ್ಧಿಯನ್ನು

(c) ವಿರುದ್ಧ (d) ಹೃದಯವನ್ನು

2. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

"ಈ ಭೂಮಿಯ ಮೇಲೆ ಕಟ್ಟಡ ಕಟ್ಟುವಾಗ ನಾವು ಒಂದಿಷ್ಟು ನೆಲವನ್ನು ಮಾತ್ರ ಅತಿಕ್ರಮಿಸುವುದಿಲ್ಲ, ಕಟ್ಟಡ ಮೇಲೇರಿದಂತೆಲ್ಲ ಭೂಮಿಯ ಮೇಲಿನ ಜಾಗವನ್ನೂ ಅತಿಕ್ರಮಿಸುತ್ತೇವೆ. ನೆಲದ ಮೌಲ್ಯದ ಬಗ್ಗೆ, ನೆಲದ ಕೊರತೆಯಾಗುವ ಬಗ್ಗೆ ಮಾತನಾಡುವ ನಾವು ನೆಲದ ಮೇಲಿನ ಈ ಜಾಗದ ಅತಿಕ್ರಮಣದ ಬಗ್ಗೆ ಮಾತನಾಡುವುದೇ ಇಲ್ಲ".

ಪರಿಸರ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಬರೆಯುವಾಗ ಪ್ರಖ್ಯಾತ ವಾಸ್ತುಶಿಲ್ಪಿ ಚಾರ್ಲ್ಸ್ ಕೊರಿಯಾ ಅವರ ಈ ಮಾತು ನೆನಪಾಗುತ್ತದೆ. ಪರಿಸರ ಸ್ನೇಹಿ ಕಟ್ಟಡಗಳು ಹಾಗೂ ಅತ್ಯಂತ ಕಡಿಮೆ ವೆಚ್ಚದ ಕಟ್ಟಡಗಳನ್ನು ನಿರ್ಮಿಸುವುದರಲ್ಲಿ ಹೆಸರುವಾಸಿಯಾದ ಚಾರ್ಲ್ಸ್ ಕೊರಿಯಾ, ಪಾಯ ಹಾಕಲು ನೆಲ ಅಗೆಯುವುದನ್ನು ಭೂಮಿಗೆ ನಾವು ಮಾಡುವ ಘಾಸಿಯನ್ನು ಸ್ವಲ್ಪವಾದರೂ ಸರಿಪಡಿಸಬೇಕೆಂದಿದ್ದರೆ ನಮ್ಮ ಸುತ್ತಲಿನ ಪರಿಸರಕ್ಕೆ ಹೊಂದುವಂತಹ ಮಣ್ಣು, ಕಲ್ಲು, ಮರ ಬಳಸಿ ಮನೆ ನಿರ್ಮಿಸಬೇಕು ಎನ್ನುತ್ತಾರೆ. ಹಾಗೆಯೇ ಭೂಮಿಯ ಮೇಲಿನ ಜಾಗದ ಅತಿಕ್ರಮಣಕ್ಕೆ ಬದಲಿಯಾಗಿ ಸಾಕಷ್ಟು ಗಾಳಿ, ಬೆಳಕು, ಮಳೆನೀರು ಮನೆಯೊಳಗೆ ಹರಿದುಬರುವಂತೆ ಕಟ್ಟಬೇಕು ಎನ್ನುತ್ತಾರೆ. ಹೊಲ ಗದ್ದೆಗಳ ಬದುವಿನಲ್ಲಿ ಬೆಳೆದ ಕಳೆ – ಕೊಳೆಗಳನ್ನು, ಗೆಡ್ಡೆ – ಕಡ್ಡಿಗಳನ್ನು, ಮನೆಯಂಗಳದಲ್ಲಿ ಬಿದ್ದ ಮರದ ಎಲೆಗಳನ್ನು, ಒಣಗಿ ಬಿದ್ದ ಟೊಂಗೆಗಳನ್ನು ಅಮೂಲ್ಯ ವಸ್ತುಗಳಂತೆ ಸಂಗ್ರಹಿಸಿ, ಊಟ – ತಿಂಡಿಗೆ, ಔಷಧಿ – ಉರುವಲಿಗೆ, ಮೇವು – ಗೊಬ್ಬರಕ್ಕೆ ಬಳಸುವ ನಮ್ಮ ಗ್ರಾಮೀಣ ಮಹಿಳೆಯರ ಪರಿಸರ ಸ್ನೇಹಕ್ಕೂ ಚಾರ್ಲ್ಸ್ ಕೊರಿಯಾರವರ ಪರಿಸರ ಸ್ನೇಹಿ ವಾಸ್ತುಶಿಲ್ಪಕ್ಕೂ ವ್ಯತ್ಯಾಸ ಇದೆ ಎನಿಸುವುದಿಲ್ಲ. ಆದರೆ ಚಾರ್ಲ್ಸ್ ಕೊರಿಯಾ ಅವರ ಚಿಂತನೆಗೆ ಈ ಚಿಂತನೆ ಆಧರಿಸಿದ ಕೆಲಸಗಳಿಗೆ ಅಪಾರ ಮನ್ನಣೆ ಇದೆ, ಮೌಲ್ಯವೂ ಇದೆ. ಮಹಿಳೆಯರ ದಿನನಿತ್ಯದ ಈ ಸಹಜ ಬದುಕಿಗೆ ಬೆಲೆ ಇಲ್ಲ. ಭೂತಾಯಿ, ಮಹಿಳೆ, ಪ್ರಕೃತಿ ಮಾತೆ ಇತ್ಯಾದಿಗಳೆಲ್ಲ ಎಷ್ಟು ಶ್ಲೇಷಗಳೆನ್ನುವುದು ಮಹಿಳೆಯರು ಪರಿಸರದೊಂದಿಗೆ ನಡೆಸುವ ಸಹಜವಾದ ಬದುಕನ್ನು ಕಂಡಾಗ ಅರಿವಾಗುತ್ತದೆ.

ಕೃಷಿಯಲ್ಲಿ ಪುರುಷರ ದೃಷ್ಟಿಕೋನ ಮಾರುಕಟ್ಟೆಯದಾದರೆ, ಮಹಿಳೆಯದು ಮನೆಯ ಎಲ್ಲ ಅಗತ್ಯಗಳನ್ನು ಆಧರಿಸಿದ್ದು. ಪುರುಷರು ಒಳ್ಳೆಯ ಬೆಲೆ ತರುವ ಒಂದೋ, ಎರಡೋ ಬೆಳೆ ತೆಗೆದು ಅದನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಮನೆಯ ಇತರ ಅಗತ್ಯಗಳನ್ನು ಖರೀದಿಸುವ ಎಂದರೆ, ಮಹಿಳೆಯರು ಮನೆ ಮುಂದಿಯ ಮತ್ತು ಜಾನುವಾರುಗಳ ಅಗತ್ಯಗಳನ್ನು ಪೂರೈಸಿಕೊಂಡು ಮತ್ತೆ ಮಾರುಕಟ್ಟೆಗಾಗಿ ಬೆಳೆಯೋಣ ಎನ್ನುತ್ತಾರೆ. ಈ ದೃಷ್ಟಿಕೋನದಲ್ಲಿಯೇ ಕೃಷಿಯ ಹಾಗೂ ಬಹುಬೆಳೆಯ ವೈವಿಧ್ಯಗಳು ಪರಿಸರದ ಸಂರಕ್ಷಣೆಗೆ ಕೊಡುವ ಕೊಡುಗೆ ಅಪಾರವಾದದ್ದು. ಮನುಷ್ಯರು ಜಾನುವಾರುಗಳು ಒಳಗೊಂಡಂತೆ ಅನೇಕ ಜೀವಿಗಳ ಜೀವನಚಕ್ರ ಇಂತಹ ವೈವಿಧ್ಯವನ್ನು ಮತ್ತು ತಾಳ್ಮೆಯನ್ನು ಅವಲಂಬಿಸಿದೆ.

**ಪ್ರಶ್ನೆಗಳು .**

I. ಚಾರ್ಲ್ಸ್ ಕೊರಿಯಾ ಅವರು ಪ್ರಖ್ಯಾತ

(a) ಶಿಲ್ಪಿ (b) ಶಿಕ್ಷಣ ತಜ್ಞ

(c) ವಾಸ್ತುಶಿಲ್ಪಿ (d) ವಿಜ್ಞಾನಿ

II. ಭೂಮಿಯ ಮೇಲಿನ ಜಾಗದ ಅತಿಕ್ರಮಣದ ಬದಲಾಗಿ ಸಾಕಷ್ಟು _____ ಮನೆಯೊಳಗೂ ಹರಿದು ಬರುವಂತೆ ಕಟ್ಟಬೇಕು.

(a) ಗಾಳಿ, ಬೆಳಕು, ನೀರು (b) ಬೆಳಕು, ಗಾಳಿ, ಮಣ್ಣು

(c) ಬೆಳಕು, ಮಣ್ಣು, ಗಾಳಿ (d) ಗಾಳಿ, ಬೆಳಕು, ಮಳೆನೀರು

III. ಗ್ರಾಮೀಣ ಮಹಿಳೆಯರು ಗೆಡ್ಡೆ ಕಡ್ಡಿಗಳನ್ನು, ಮರದ ಎಲೆಗಳನ್ನು ಮತ್ತು ಒಣಗಿ ಬಿದ್ದ ಟೊಂಗೆಗಳನ್ನು ಸಂಗ್ರಹಿಸಿ _____ ಬಳಸುವರು.

1. ಊಟ, ತಿಂಡಿ, ಮಾರಾಟಕ್ಕೆ
2. ಔಷಧಿ – ಉರುವಲಿಗೆ
3. ಮೇವು ಗೊಬ್ಬರಕ್ಕೆ
4. ಊಟ ತಿಂಡಿಗೆ

ಸರಿ ಉತ್ತರ ಆರಿಸಿ.

(a) 1, 2 ಮತ್ತು 3 (b) 4, 2 ಮತ್ತು 3

(c) 3, 2 ಮತ್ತು 1 (d) 1, 4 ಮತ್ತು 3

IV. ಭೂತಾಯಿ, ಮಹಿಳೆ, ಪ್ರಕೃತಿ ಮಾತೆ ಇತ್ಯಾದಿಗಳೆಲ್ಲ ಎಷ್ಟು ಶ್ಲೇಷಗಳೆನ್ನುವುದು ಮಹಿಳೆಯರು _____ ನಡೆಸುವ ಸಹಜವಾದ ಬದುಕನ್ನು ಕಂಡಾಗ ಅರಿವಾಗುತ್ತದೆ.

(a) ಪರಿಸರದೊಂದಿಗೆ (b) ಪರಿವಾರದೊಂದಿಗೆ

(c) ಮಕ್ಕಳೊಂದಿಗೆ (d) ನೆರೆಯವರೊಂದಿಗೆ

V. ಕೃಷಿಯಲ್ಲಿ ಪುರುಷರ ದೃಷ್ಟಿಕೋನ _____,

ಮಹಿಳೆಯದು ಮನೆಯ ಎಲ್ಲ _____ ಆಧರಿಸಿದ್ದು

(a) ಅಗತ್ಯದಾದರೆ – ಮಾರುಕಟ್ಟೆ

(b) ಮಾರುಕಟ್ಟೆಯದಾದರೆ – ಅನಗತ್ಯಗಳನ್ನು

(c) ವ್ಯಾಪಾರದಾದರೆ – ಅನಗತ್ಯಗಳನ್ನು

(d) ಮಾರುಕಟ್ಟೆಯದಾದರೆ – ಅಗತ್ಯಗಳನ್ನು

3. ಕೆಳಗೆ ಕೊಟ್ಟಿರುವ ವಿದ್ಯಾವಾಚಸ್ಪತಿ ಡಾ॥ ಬನ್ನಂಜೆ ಗೋವಿಂದಾಚಾರ್ಯ ಅವರು ಬರೆದಿರುವ ಶುಕನಾಸನ ಉಪದೇಶ ಪರಿಚಿತ ಗದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಗುರುವಾಣಿ ಎಷ್ಟು ಪರಿಶುದ್ಧವಾದರೂ ಮೂರ್ಖನ ಕಿವಿಗೆ ಅದು ಒಂದು ಹೊರೆ. ಅಂಥವರು ಕಿವಿಯೊಳಗೆ ಹಿತವಚನ ಹೊಕ್ಕಾಗ ತಿಳಿನೀರು ಹೊಕ್ಕಂತೆ ಸಂಕಟಪಟ್ಟುಕೊಳ್ಳುತ್ತಾರೆ. ಆದರೆ ಸಜ್ಜನರಿಗೆ ಗುರುವಚನ ಎನ್ನುವುದು ಕಿವಿಗೆ ಒಂದು ಆಭರಣ. ಅದರಿಂದ ಅವರ ಶ್ರೀಮುಖ ಇನ್ನಷ್ಟು ಶ್ರೀಮಂತವಾಗುತ್ತದೆ. ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ, ಬಗೆಯ ಕೊಳೆಯನ್ನೆಲ್ಲ ಹಿತವಚನ ತೊಳೆದುಬಿಡುತ್ತದೆ. ಆಗ ಬಾಳಿನಲ್ಲಿ ಒಂದು ಸಂಯಮ, ಒಂದು ಪಕ್ವತೆ, ಒಂದು ಶಾಂತಿ ಕಾಣಿಸಿಕೊಳ್ಳುತ್ತದೆ.

ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ' ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು. ಬೊಜ್ಜು ಬೆಳೆಯದೆ ಬರುವ ಗುರುತ್ವ ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ ; ಪಂಜು ಇಲ್ಲದೆ ಬೆಳಗುವ ಬೆಳಕು ; ಉದ್ವೇಗ ಬರಿಸದ ಜಾಗರಣೆ.

ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು, ಅಹಂಕಾರದಿಂದ ಅವರ ಕಿವಿ ಕಿವುಡಾಗಿ ಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. ಯಾರದೋ ದಾಕ್ಷಿಣ್ಯಕ್ಕೆ ಉಪದೇಶವನ್ನು ಆಲಿಸಿದರೂ ಎಂಥ ಅನಾದರ ಆ ಮೋರೆಯಲ್ಲಿ ! ಆನೆಯಂತೆ ಅರೆ ಮುಚ್ಚಿದ ಕಣ್ಣಲ್ಲಿ "ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ" ಎನುವಂಥ ಭಾವ, ಉಪದೇಶಿಸ ಬಂದ ಗುರುಗಳಿಗೂ ಇದು ಒಂದು ವ್ಯಾಧಿ. ಇಂಥವರಿಗೆ ಪಾಠ ಹೇಳುವ ದೌರ್ಭಾಗ್ಯ ತಮಗೇಕೆ ಬಂತು ಎಂದು ಅವರು ನೊಂದುಕೊಳ್ಳುತ್ತಾರೆ.

ರಾಜರ ಪ್ರಕೃತಿಯೇ ಹಾಗೆ. ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಇದು ಎಲ್ಲ ದುಡ್ಡಿನ ಮಹಿಮೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷ. ಅದರ ಅಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿ ಮಂಕಾಗಿ ಬಿಡುತ್ತದೆ.

ಕುಮಾರ, ನೀನು ಮಂಗಲವನ್ನೇ ಬಯಸುವವನು ಎಂದು ಈ ಮಾತನ್ನು ಹೇಳುತ್ತಿದ್ದೇನೆ. ಮೊದಲು ಈ ಸಂಪತ್ತಿನ ನೆಲೆಯನ್ನೆ ಒಂದಿಷ್ಟು ವಿಚಾರಿಸಿ ನೋಡು ;

ಲಕ್ಷ್ಮೀಯೆಂಬ ಚಂಚಲೆ ಹಾಡುಹಗಲಿನಿಂದ ಮೇಲೆದ್ದು ಬರುವಾಗಲೆ ತನ್ನ ಜತೆಗಾರರಿಂದ ಹಲವೆಲ್ಲ ದುರ್ಗುಣಗಳನ್ನು ಹೊತ್ತುಕೊಂಡೆ ಬಂದಿದ್ದಾಳೆ ; ಚಂದ್ರಕಲೆಯ ವಕ್ರತೆ, ಉಚ್ಚೈಶ್ರವಸ್ಸಿನ ಚಾಪಲ್ಯ, ಕಾಲಕೂಟದ ಮೋಹಕತ್ವ, ಮದ್ಯದ ಮಾದಕತ್ವ, ಕೌಸ್ತುಭದ ಕಾಠಿನ್ಯ ಈ ಎಲ್ಲ ಗುಣಗಳು ಸಂಪತ್ತಿನ ಸಹಚಾರಿಗಳು. ಈ ಹಣದಷ್ಟು ಕೆಟ್ಟ ವಸ್ತು ಜಗತ್ತಿನಲ್ಲಿ ಇನ್ನೊಂದಿಲ್ಲ. ಏಕೆಂದರೆ ಅದಕ್ಕೆ ಯಾರ ಗುರುತೂ ಇಲ್ಲ. ಸಂಪತ್ತು ಸಿಕ್ಕಿತು ಎಂದ ಮಾತ್ರಕೆಯೆ ಸುಖವುಂಟೆ ? ಅದನ್ನು ಕಾಯುವ ಕಷ್ಟ, ಕಾಪಾಡುವ ಪಾಡು ಯಾರಿಗೆ ಬೇಕು ? ಎಷ್ಟು ಬಿಗಿಯಾಗಿ ಬಿಗಿದರೂ ನುಸುಳಿಕೊಳ್ಳುವಂಥ ಜಾಣು ಅದಕ್ಕೆ ತಿಳಿದಿದೆ. ಮಹಾವೀರರಾದ ಸಾವಿರಾರು ಸೈನಿಕರ ಕತ್ತಿಗಳ ಪಂಜರದ ನಡುವೆ ಕಾಪಿಟ್ಟ ಸಂಪತ್ತು ಕೂಡ ತನ್ನ ತಾನೆ ಕಣ್ಮರೆಯಾಗಿ ಬಿಡುತ್ತದೆ. ಮದಜಲವನ್ನು ಸುರಿದು ಸುತ್ತೆಲ್ಲ ಕತ್ತಲು ಬರಿಸುವ ಮದ್ದಾನೆಗಳ ಕಾವಲಿನಲ್ಲಿ ಕೂಡ ಕಣ್ಣು ತಪ್ಪಿಸಿ ಓಡಿಬಿಡುತ್ತದೆ.

**ಪ್ರಶ್ನೆಗಳು.**

I. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ ?

II. ರಾಜರ ಮನೆತನದಲ್ಲಿ ಹುಟ್ಟಿದವರು ಉಪದೇಶದ ಬಗೆಗೆ ಯಾವ ವಿಚಾರ ಹೊಂದಿರುತ್ತಾರೆ ?

III. ಯಾರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ ?

IV. ಲಕ್ಷ್ಮೀ ಯಾವ ಯಾವ ದುರ್ಗುಣಗಳನ್ನು ಹೊತ್ತು ಬಂದಿದ್ದಾಳೆ ?

V. ಗುರುವಚನ ಯಾರ ಕಿವಿಗೆ ಆಭರಣ ?

4. ಈ ಕೆಳಗೆ ಕೊಟ್ಟಿರುವ ಡಾ. ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ ಪರಿಚಿತ 'ಹಲಗಲಿ ಬೇಡರು' ಲಾವಣಿಯನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಜಡಗ ಹೇಳತಾನೊ ಹೊಡೆಯಿರಿ ಇದರ ಪೂರ ಘಾತಕರಾ
ಇಸವಾಸಘಾತಕ ಮಾಡಿದರಿವರ, ನಂಬಿಗಿಲ್ಲ ನಮಗ ಪಿತೂರಾ
ಮೋಸಮಾಡಿ ನಮದೇಶ ಗೆದಿತಾರೊ ಮುಂದ ನಮಗ ಘೋರಾ
ಅಂದು ಹೊಡೆದಾನೊ ಒಂದು ಗುಂಡಿಗೆ ಆದ ಸಾಹೇಬ ಟಾರ
'ಕಾರ ' ಸಾಹೇಬ ಬೆಂಕಿ ಚೂರಾದ ಲೂಟ ಮಾಡಂತನೊ ಊರಾ
ಸಿಟ್ಟಲೆ ಹೊಡೆದರು ಸಿಡಿಲಸಿಡಿದ್ಹಾಂಗ ಗುಂಡು ಸುರಿದಾವ ಭರಪೂರ
ಹನುಮ ಹೇಳತಾನ ಗುಂಡು ಹೊಡಿದು ಕೆರ ಕೆರವು ನಷ್ಟ ಭಾರಿ
ಮುನ್ನೂರ ಮಂದಿ ಮೈಮ್ಯಾಗ ಬಂದರ ಆಗ ನೋಡೊ ಜೋರಾ
ಭೀಮನು ಇದುರಿಗೆ ನಿಂತಾ ಐನೂರ್ಮಂದಿಗೆ ಮತ್ತಾ.
ಬಾಲನು ಮಾಡಿದ ಕಸರತ್ತಾ, ಕುದುರಿಯ ಕಡಿದು ಹತ್ತಿಪ್ಪತ್ತಾ
ರಾಮನ ಕಡಿತ ವಿಪರೀತಾ, ಕಾಲುವೆ ಹರಿತೊ ರಕ್ತಾ.
ಸಾವಿರ ಆಳಿಗೆ ಒಬ್ಬ ಕೂಗತಾನೊ. ಕಡಿಕಡಿರಿ ಅಂತ ಮತ್ತಾ.
ನಾಲ್ಕು ಮಂದಿ ಹಿಂಗ ಕಡಿದು ಸತ್ತರೊ. ಹಲಗಲಿ ಬಂಟರಣ್ಣಾ ಜನಕ ॥
ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ
ಉಪ್ಪು ಎಣ್ಣೆ ಅರಿಸಿಣ ಜೀರಿಗಿ ಅಕ್ಕಿ ಸಕ್ಕಾರಿ ಬೆಲ್ಲಾ
ಗಂಗಳ ಚರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ
ಸಿಕ್ಕದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ
ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು
ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು
ಕುರ್ತುಕೋಟಿ ಕಲ್ಮೇಶನ ದಯೆಯಿಂದ ಹಾಡಿದೆನಣ್ಣಾ ಜನಕ ॥

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

I. ಊರನ್ನು ಲೂಟಿ ಮಾಡಲು ಹೇಳಿದವರು ಯಾರು ?

II. ಸಿಡಿಲು ಸಿಡಿದ ಹಾಗೆ ಏನು ಸಿಡಿದವು ?

III. ಹತ್ತಿಪ್ಪತ್ತು ಕುದುರೆಗಳನ್ನು ಕಡಿದವರಾರು ?

IV. ಹಲಗಲಿ ಗುರುತು ಉಳಿಯದಂತಾಗಲು ಕಾರಣವೇನು ?

V. ಲಾವಣಿಕಾರ ಅಂಕಿತಗೊಳಿಸಿರುವ ದೈವ ಯಾವುದು ?

## SECTION – B

## (Grammar, Non detailed Portion)

### ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ : 20 ಅಂಕಗಳು

5. ಕೆಳಗಿನ ಪ್ರತಿಯೊಂದು ಬಹುಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. **10 × 1 = 10**

I. ಕೆಳಗೆ ಕೊಟ್ಟಿರುವ ಸಂಧಿ ಮತ್ತು ಸಂಧಿ ಪದಗಳನ್ನು ಹೊಂದಿಸಿ ಬರೆಯಿರಿ.

| | | | |
|---|---|---|---|
| A. | ಮಹಾತ್ಮ | 1. | ಗುಣ ಸಂಧಿ |
| B. | ಮೈದೋರು | 2. | ಯಣ್ ಸಂಧಿ |
| C. | ಜಾತ್ಯತೀತ | 3. | ಸವರ್ಣದೀರ್ಘ ಸಂಧಿ |
| D. | ದೇವೇಂದ್ರ | 4. | ಆದೇಶ ಸಂಧಿ |
| | | 5. | ಲೋಪ ಸಂಧಿ |

(a) A – 4 B – 3 C – 5 D – 1

(b) A – 3 B – 4 C – 2 D – 1

(c) A – 3 B – 1 C – 4 D – 2

(d) A – 2 B – 1 C – 4 D – 5

II. ಕಬ್ಬ – ಹಸಾದ – ಈ ಪದಗಳ ತತ್ಸಮ ರೂಪಗಳು

(a) ಕವನ – ಪಸಂದ

(b) ಕಾವ್ಯ – ಪ್ರಸಾದ

(c) ಕಾವ್ಯ – ಪಸದ

(d) ಹಾಡು – ತೀರ್ಥ

III. ಕೆಳಗಿನ ಪದಗಳಲ್ಲಿ ಸರಿಯಾದ ಸಮಾಸ ಪದಗಳನ್ನು ಆರಿಸಿ ಬರೆಯಿರಿ.

1. ಮುಂಗೈ – ಅಂಶಿ ಸಮಾಸ
2. ನಲ್ಗುದುರೆ – ಬಹುವ್ರೀಹಿ ಸಮಾಸ
3. ಹೆಮ್ಮರ – ತತ್ಪುರುಷ ಸಮಾಸ
4. ಮೋಸಮಾಡು – ಕ್ರಿಯಾ ಸಮಾಸ

(a) 1 ಮತ್ತು 2

(b) 2 ಮತ್ತು 3

(c) 3 ಮತ್ತು 4

(d) 1 ಮತ್ತು 4

IV. ಜೋಡುನುಡಿಗೆ ಉದಾಹರಣೆಯಿದು

(a) ಹಣ್ಣು ಹಂಪಲ

(b) ಕಟ್ಟ ಕಡೆಗೆ

(c) ತುತ್ತತುದಿ

(d) ಧಗಧಗ

V. ಅಬ್ಧಿಪ – ಪದದ ಅರ್ಥ

(a) ಅರುಣ

(b) ತರುಣ

(c) ವರುಣ

(d) ಕರಣ

VI. ನೋಡೋಣ – ಈ ಕ್ರಿಯಾಪದದ ಧಾತುರೂಪ

(a) ನೋಡಿದೆ

(b) ನೋಡಿ

(c) ನೋಡೋದೆ

(d) ನೋಡು

VII. ತೃತೀಯಾ ವಿಭಕ್ತಿಯ ಕಾರಕಾರ್ಥ

(a) ಕರಣಾರ್ಥ

(b) ಕರ್ಮಾರ್ಥ

(c) ಸಂಪ್ರದಾನ

(d) ಅಪಾದಾನ

VIII. ಆ ಗಿಳಿಗಳು ತಾವು ವಾಸ ಮಾಡುತ್ತಿದ್ದ ಮರಕ್ಕೆ ಮರಳಿ ಬಂದವು –

ಈ ವಾಕ್ಯದಲ್ಲಿರುವ ಆತ್ಮಾರ್ಥಕ ಸರ್ವನಾಮ

(a) ಗಿಳಿಗಳು (b) ಬಂದವು

(c) ಮರಳಿ (d) ತಾವು

IX. ಊರ ಜನರಲ್ಲಿ ನಾಲ್ವರು ನ್ಯಾಯ ಕೇಳಲು ನ್ಯಾಯಾಧೀಶರ ಬಳಿ ಬಂದರು – ಈ ವಾಕ್ಯದಲ್ಲಿರುವ ಸಂಖ್ಯೇಯ ವಾಚಕ

(a) ಊರ (b) ಬಳಿ

(c) ನಾಲ್ವರು (d) ಬಂದರು

X. ನಾವು ಯಾವಾಗಲೂ ಒಳ್ಳೆಯವರ ಸಹವಾಸವನ್ನು ಮಾಡಬೇಕು – ಇಲ್ಲಿರುವ ಗುಣವಾಚಕ

(a) ಒಳ್ಳೆಯ (b) ಸಹವಾಸ

(c) ಮಾಡಬೇಕು (d) ನಾವು

6. ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ. **5 × 1 = 5**

I. ನೀವೆಲ್ಲರೂ ಒಂದೇ ಸಾಲಿನಲ್ಲಿ ನಿಲ್ಲಬೇಕು – ಈ ವಾಕ್ಯವನ್ನು ವಿಧ್ಯರ್ಥಕ ರೂಪದಲ್ಲಿ ಬರೆಯಿರಿ.

II. ಕಾವೇರಿ ನಾಲೆ ಇಲ್ಲಿಗೆ ಬಂದರೆ, ನಮ್ಮ ಬಡತನ ನೀಗುವುದೇ ?

ಈ ವಾಕ್ಯವನ್ನು ಸಂಭವನಾರ್ಥಕ ರೂಪದಲ್ಲಿ ಬರೆಯಿರಿ.

III. ಈ ಗ್ರಂಥದಲ್ಲಿ ಪಾಕಶಾಸ್ತ್ರದ ವಿಷಯವನ್ನು ಚೆನ್ನಾಗಿ ಹೇಳಿದೆ – ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

IV. ಈ ಕೆಳಗಿನ ಗಾದೆ ಮಾತಿನ ಅರ್ಥವನ್ನು ಬರೆಯಿರಿ.

ಮನಸ್ಸಿದ್ದರೆ ಮಾರ್ಗ

**ಅಥವಾ (or)**

ಮಾತೆ ಮುತ್ತು ಮಾತೇ ಮೃತ್ಯು

V. ದೊಡ್ಡಸ್ತಿಕೆ – ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ.

7. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. **5 × 1 = 5**

I. ಗಾಂಧೀಜಿಯವರು 'ಅನ್ ಟು ದಿಸ್ ಲಾಸ್ಟ್' ಪುಸ್ತಕವನ್ನು _____ ಹೆಸರಿನಿಂದ ಗುಜರಾತಿ ಭಾಷೆಗೆ ಅನುವಾದ ಮಾಡಿದ್ದಾರೆ.

(a) ನವೋದಯ (b) ಸರ್ವೋದಯ

(c) ಸತ್ಯಾಗ್ರಹ (d) ಸಹಕಾರ

II. ಆತ್ಮ ಗೌರವ ಚಳವಳಿಯ ರೂವಾರಿ

(a) ವಿನೋಬಾ ಭಾವೆ (b) ಬಾಲಗಂಗಾಧರ ತಿಲಕ್

(c) ಶ್ರೀ ನಾರಾಯಣ ಗುರು (d) ಪೆರಿಯಾರ್

III. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿ

(a) ಡಾಲ್‌ಹೌಸಿ (b) ವಾರನ್ ಹೆಸ್ಟಿಂಗ್

(c) ಜನರಲ್ ಡಯರ್ (d) ಇರ್ವಿನ್

IV. ಯಾವ ಯಾವ ವಸ್ತುಗಳನ್ನು ಬಳಸಬೇಡಿರೆಂದು ಜನಾಂದೋಲನ ಮಾಡಲಾಯಿತು ?

1. ಬಣ್ಣದ ಕಾಗದ – ಗಾಜಿನ ಮಣಿಗಳು 2. ಬೇಗಡಿ – ತುರಾಯಿ

3. ವಿದೇಶಿ ಬಟ್ಟೆ 4. ಪಟಾಕಿ – ಕರ್ಪೂರ

ಸರಿಯಾದ ಗುಂಪು ಆರಿಸಿ.

(a) 1, 2 ಮತ್ತು 3 (b) 1, 2 ಮತ್ತು 4

(c) 2, 3 ಮತ್ತು 4 (d) 1, 3 ಮತ್ತು 4

V. ಪೌರ ಸ್ವಾತಂತ್ರ್ಯ _____ ಅಂಶಗಳನ್ನು ಹೊಂದಿರುತ್ತದೆ.

(a) ಮೂರು (b) ಎರಡು

(c) ಐದು (d) ನಾಲ್ಕು

## PART-B : (40 ಅಂಕಗಳು)

## SECTION – C (Writing Skill)

### ಬರವಣಿಗೆ ಕೌಶಲ್ಯ : 12 ಅಂಕಗಳು

8. ನಿಮ್ಮ ಬಡಾವಣೆ / ಬೀದಿಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಮಂಜೂರು ಮಾಡಲು ವಿನಂತಿಸಿಕೊಂಡು ನಗರಸಭೆ / ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ. 4

**ಅಥವಾ (or)**

ದಿನಾಂಕ 1-2-2024 ರ ವಿಶ್ವವಾಣಿ ದಿನಪತ್ರಿಕೆಯ ಪ್ರಕಟಣೆಯ ಮೇರೆಗೆ 'ಆಡಳಿತ ಮಂಡಳಿ, ಕುವೆಂಪು ವಿದ್ಯಾಲಯ ಮೈಸೂರು' ಇಲ್ಲಿಗೆ ಕನ್ನಡ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿ.

9. ನಿಮ್ಮ ಶಾಲೆಯಲ್ಲಿ ಆಚರಿಸಿದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ವರದಿ ಬರೆಯಿರಿ. 4

10. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ **ಒಂದು** ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 4

   I. ಸ್ವಚ್ಛ ಭಾರತ ಅಭಿಯಾನ

   II. ಪ್ರತಿಭಾ ಪಲಾಯನ

   III. ಅಕ್ಷರ ದಾಸೋಹ ದ ಮಹತ್ವ

## SECTION – D (Descriptive type)

### ಪಠ್ಯಗಳ ಅಧ್ಯಯನ : 28 ಅಂಕಗಳು

11. ಈ ಕೆಳಗಿನ ಪ್ರಶ್ನೆಗಳಿಗೆ **ಎರಡು** ವಾಕ್ಯಗಳಲ್ಲಿ ಉತ್ತರಿಸಿ. $4 \times 2 = 8$

   I. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು ?

   II. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?

   III. ಬಾಳಿನಲ್ಲಿ ತೃಪ್ತಿ ಹೊಂದಬೇಕಾದರೆ ಏನು ಮಾಡಬೇಕೆಂದು ವಿವೇಕಾನಂದರ ಅಭಿಪ್ರಾಯ ?

   IV. ನಾರಾಯಣಗುರು ಅವರ ಪ್ರಮುಖ ಆಶಯ ಏನಾಗಿತ್ತು ?

12. ಈ ಕೆಳಗಿನ ಪ್ರಶ್ನೆಗಳಿಗೆ **5-6** ವಾಕ್ಯಗಳಲ್ಲಿ ಉತ್ತರಿಸಿ. **2 × 3 = 6**

I. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು ?

II. ಪ್ರಕೃತಿಯ 'ಹಸುರು' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

13. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ. **2 × 3 = 6**

I. "ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ"

**ಅಥವಾ (or)**

"ಭಗವಂತನ ಗುಣ ಎಂದಾದರೂ ಮನುಷ್ಯನಲ್ಲಿ ಬಂದೀತೇ ?"

II. ಮಾರಿಗೌತಣವಾಯ್ತು ನಾಳಿನ ಭಾರತವು

**ಅಥವಾ (or)**

ಅರಸುಗಳ ವಾಜಿಯಂ ಬಿಡು

14. ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1 × 4 = 4**

I. "ನಂಬಿ ಕೆಟ್ಟವರಿಲ್ಲ" ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?

**ಅಥವಾ (or)**

ವೃಕ್ಷಸಾಕ್ಷಿ – ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ? ಏಕೆ ?

15. ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1 × 4 = 4**

I. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶಯ ?

**ಅಥವಾ (or)**

ದುರ್ಯೋಧನನ ಗೆಳೆಯನಾಗಿ ಹಾಗೂ ಪಾಂಡವರ ಸಹೋದರನಾಗಿ ಕರ್ಣನು ತನ್ನ ಕರ್ತವ್ಯವನ್ನು ಹೇಗೆ ನಿರ್ವಹಿಸಿದನು ?